

بِسۡمِ اللّٰہِ الرَّحۡمٰنِ الرَّحِیۡمِ

# ಪರದೆ : ಇಸ್ಲಾಮ್ ಬೋಧಿಸುವ ನೈತಿಕ ಮೌಲ್ಯಗಳ ಸಂರಕ್ಷಣೆಗೆ ಅನಿವಾರ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 13–01–2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕೆಲವು ಜನರು ಭಾವಿಸುತ್ತಾರೆ ಧರ್ಮವು ಅವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ ಮತ್ತು ಅವರ ಮೇಲೆ ನಿರ್ಬಂಧಗಳನ್ನು ಹೇರುತ್ತದೆ ಎಂದು. ಆದರೆ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೇಳುವುದೇನೆಂದರೆ: وَمَا جَعَلَ عَلَیۡکُمۡ فِی الدِّیۡنِ مِنۡ حَرَجٍ **ವಮಾ ಜಅಲ ಅಲೈಕುಮ್ ಫಿದ್ದೀನಿ ಮಿನ್ ಹರಜಿನ್.** ಧರ್ಮಕ್ಕೆ ಸಂಬಂಧಿಸಿ ನಿಮ್ಮ ಮೇಲೆ ಯಾವುದೇ ಕಷ್ಟವನ್ನು ಹೇರಿಲ್ಲ ಎಂದು. ಇಸ್ಲಾಮೀ ಶರೀಅತಿನ ಉದ್ದೇಶ ಮನುಷ್ಯರ ಹೊರೆಗಳನ್ನು ಹಗುರ ಮಾಡುವುದಾಗಿದೆ. ಅಷ್ಟು ಮಾತ್ರವಲ್ಲ ಮನುಷ್ಯನನ್ನು ಅದು ಪ್ರತಿಯೊಂದು ವಿಪತ್ತಿನಿಂದಲೂ ಅಪಾಯಗಳಿಂದಲೂ ರಕ್ಷಿಸುತ್ತದೆ. ಅಲ್ಲಾಹನ ಈ ವಚನ ಸ್ಪಷ್ಟಪಡಿಸುವುದೇನೆಂದರೆ, ನಿಮಗೆ ಅವತೀರ್ಣಗೊಳಿಸಲ್ಪಟ್ಟ ಈ ಧರ್ಮದಲ್ಲಿ, ಎಂದರೆ ಇಸ್ಲಾಮ್ ಧರ್ಮದಲ್ಲಿ, ನಿಮ್ಮನ್ನು ಕಷ್ಟಕ್ಕೆ ಗುರಿಪಡಿಸುವ ಯಾವುದೇ ಆಜ್ಞೆ ಇಲ್ಲ ಎಂದು. ಚಿಕ್ಕ ಚಿಕ್ಕ ಆಜ್ಞೆಗಳಿಂದ ಪ್ರಾರಂಭಿಸಿ ದೊಡ್ಡ ದೊಡ್ಡ ಆಜ್ಞೆಗಳ ತನಕ ಪ್ರತಿಯೊಂದು ಆಜ್ಞೆ ಅನುಗ್ರಹದಾಯಕವಾಗಿರುತ್ತದೆ. ಆದುದರಿಂದ, ಮನುಷ್ಯನ ಯೋಚನೆ ತಪ್ಪಾಗಿರುತ್ತದೆಯೇ ಹೊರತು ಅಲ್ಲಾಹನ ವಚನ ತಪ್ಪಾಗಲು ಸಾಧ್ಯವೇ ಇಲ್ಲ. ನಾವು ಅಲ್ಲಾಹನಿಂದ ಸೃಷ್ಟಿಸಲ್ಪಟ್ಟವರಾಗಿರುವಾಗ ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವುದಿಲ್ಲವಾದರೆ ನಾವು ನಮಗೆಯೇ ನಷ್ಟವನ್ನು ಉಂಟುಮಾಡುತ್ತೇವೆ. ಮನುಷ್ಯನು ಬುದ್ಧಿಯನ್ನು ಬಳಸದಿದ್ದರೆ, 'ನಾನು ಮನುಷ್ಯರನ್ನು ದಾರಿ ತಪ್ಪಿಸಿ ಅವರಿಗೆ ಹಾನಿಯನ್ನುಂಟು ಮಾಡುವೆನು' ಎಂದು ಪ್ರಥಮ ದಿನದಂದೇ ಪ್ರತಿಜ್ಞೆ ಮಾಡಿದ ಶೈತಾನನು ಮನುಷ್ಯರನ್ನು ವಿನಾಶದ ಹೊಂಡಕ್ಕೆ ಹಾಕಿಬಿಡುವನು. ಆದುದರಿಂದ ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಅಲ್ಲಾಹನ ಆಜ್ಞೆಗಳನ್ನು ಪಾಲನೆ ಮಾಡುವುದು ಆವಶ್ಯಕವಾಗಿದೆ.

ಕೆಲವು ವಿಷಯಗಳು ಚಿಕ್ಕದು ಎಂದು ತೋರುತ್ತವೆ. ಆದರೆ ಅವುಗಳನ್ನು ಸಾಮಾನ್ಯವೆಂದು ಪರಿಗಣಿಸಿದ ಕಾರಣ, ಕಾಲ ಕಳೆದ ಹಾಗೆ ಅವುಗಳನ್ನು ನಿರ್ಲಕ್ಷಿಸಿದ ಪರಿಣಾಮ, ಅತ್ಯಂತ ಭಯಾನಕವಾಗುತ್ತದೆ. ಆದುದರಿಂದ ಒಬ್ಬ ವಿಶ್ವಾಸಿ ಅಲ್ಲಾಹನ ಯಾವುದೇ ಆಜ್ಞೆಯನ್ನು ಚಿಕ್ಕದು ಎಂದು ಯಾವತ್ತೂ ಪರಿಗಣಿಸಬಾರದು. ಇಂದಿನ ಕಾಲದಲ್ಲಿ ನಾವು ನೋಡುವುದೇನೆಂದರೆ ಲೋಕದ ಬಹುತೇಕ ಜನರು ಧರ್ಮದಿಂದ ದೂರ ಸರಿದಿದ್ದಾರೆ. ಆ ಕಾರಣದಿಂದ ಯಾವುದು ಒಳಿತು ಯಾವುದು ಕೆಡುಕು ಎಂಬುದರ ಬಗ್ಗೆ ಮೌಲ್ಯ ಮಾಪನ ಬದಲಾಯಿಸುತ್ತಾ ಇರುತ್ತದೆ. ಈ ಕಾಲದಲ್ಲಿ ಸ್ವಾತಂತ್ರ್ಯ ಮತ್ತು ಫ್ಯಾಶನ್ ಹೆಸರಲ್ಲಿ ಮಹಿಳೆಯರಲ್ಲಿ ಮತ್ತು ಪುರುಷರಲ್ಲಿ ನಿರ್ಲಜ್ಜತೆ ವ್ಯಾಪಕವಾಗಿರುವುದನ್ನು ನಾವು ಕಾಣುತ್ತೇವೆ. ಅಭಿವೃದ್ಧಿ ಹೊಂದಿದವರು ಎಂಬುದರ ಚಿಹ್ನೆ ಬಹಿರಂಗವಾಗಿ ನಿರ್ಲಜ್ಜೆಯಿಂದ ವರ್ತಿಸುವುದೆಂದು ಪರಿಗಣಿಸಲಾಗುತ್ತದೆ. ಲಜ್ಜೆ ಎಂಬ ವಸ್ತುವೇ ಇಲ್ಲದಾಗಿದೆ. ಇದರ ಪ್ರಭಾವ ನಮ್ಮ ಯುವಕ ಯುವತಿಯರಲ್ಲೂ ಉಂಟಾಗಲು ಸಾಧ್ಯತೆಗಳಿವೆ. ಇಲ್ಲಿ ವಾಸಿಸುವವರ ಮೇಲೆ ಸ್ವಲ್ಪ ಮಟ್ಟಿಗೆ ಪ್ರಭಾವ ಈಗಾಗಲೇ ಉಂಟಾಗಿದೆ. ಕೆಲವು ಬಾಲಿಕೆಯರು ತಾರುಣ್ಯಕ್ಕೆ ತಲಪುವಾಗ ನನಗೆ ಬರೆಯುತ್ತಾರೆ: ಇಸ್ಲಾಮ್‌ನಲ್ಲಿ ಪರದೆ ಆವಶ್ಯಕವಾಗಿರುವುದು ಏಕೆ ಎಂದು. ನಾವು ಬಿಗಿಯಾದ ಜೀನ್ಸ್ ಮತ್ತು ಬ್ಲೌಸ್ ಧರಿಸಿ, ಬುರ್ಖ ಅಥವಾ ಕೋಟು ಧರಿಸದೆ ಮನೆಯಿಂದ ಏಕೆ ಹೊರಗೆ ಹೋಗಬಾರದು? ಯುರೋಪಿನ ಸ್ವತಂತ್ರ ಹುಡುಗಿಯರ ಹಾಗೆ ನಾವು ಏಕೆ ಬಟ್ಟೆ ಧರಿಸಬಾರದು? ಎಂದೆಲ್ಲಾ ಕೇಳುತ್ತಾರೆ. ಯಾವಾಗಲೂ ನಾವು ನೆನಪಿಡಬೇಕಾದ ಮೊದಲನೆಯ ವಿಷಯವೇನೆಂದರೆ, ನಾವು ಧರ್ಮವನ್ನು ಅವಲಂಬಿಸಲು ಬಯಸುವುದಾದರೆ ನಾವು ಧರ್ಮದ ಉಪದೇಶಗಳನ್ನು ಸಹ ಅನುಸರಿಸುವವರಾಗಬೇಕು. ನಾವು ಮುಸ್ಲಿಮರಾಗಿದ್ದೇವೆ, ನಾವು ಇಸ್ಲಾಮ್ ಧರ್ಮವನ್ನು ಅನುಷ್ಠಿಸುವವರಾಗಿದ್ದೇವೆ ಎಂದು ನಾವು ಪ್ರಕಟಿಸುವುದಾದರೆ ನಾವು ಧರ್ಮದ ನಿಬಂಧನೆಗಳನ್ನು ಪಾಲಿಸಬೇಕಾದುದು ಸಹ ಆವಶ್ಯಕವಾಗಿದೆ. ಅಲ್ಲಾಹನ ಮತ್ತು ಅವನ ಸಂದೇಶವಾಹಕರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗಳನ್ನು ಅನುಷ್ಠಾನಕ್ಕೆ ತರುವುದು ಆವಶ್ಯಕವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಲಜ್ಜೆಯು ಸತ್ಯವಿಶ್ವಾಸದ ಒಂದು ಭಾಗವಾಗಿದೆ ಎಂದು. ಆದುದರಿಂದ ಲಜ್ಜೆ, ಪೋಷಾಕು ಮತ್ತು ಪರದೆ ನಮ್ಮ ವಿಶ್ವಾಸವನ್ನು ಸಂರಕ್ಷಿಸಲು ಆವಶ್ಯಕವಾಗಿವೆ. ಅಭಿವೃದ್ಧಿ ಹೊಂದಿದ ದೇಶಗಳು ಸ್ವಾತಂತ್ರ್ಯ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ತಮ್ಮ ಲಜ್ಜೆಯನ್ನು ಕೊನೆಗೊಳಿಸುತ್ತಿರುವುದರ ಕಾರಣವೇನೆಂದರೆ, ಅವರು ಧರ್ಮದಿಂದ ದೂರ ಸರಿದಿರುವುದಾಗಿದೆ. ಪ್ರತಿಯೊಬ್ಬ ಅಹ್ಮದಿ ಬಾಲಿಕೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿ 'ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು' ಎಂದು ಪ್ರತಿಜ್ಞೆ ಮಾಡಿದ್ದಾಳೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ಪ್ರತಿಯೊಬ್ಬ ಅಹ್ಮದಿ ಬಾಲಕ, ಅಹ್ಮದಿ ಪುರುಷ ಮತ್ತು ಮಹಿಳೆ 'ನಾನು ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವೆನು' ಎಂದು ಪ್ರತಿಜ್ಞೆ ಮಾಡಿದ್ದಾರೆ. ಆದರೆ ಧರ್ಮದ ಉಪದೇಶಗಳ ಪ್ರಕಾರ

ಕೆಲಸಗಳನ್ನು ಮಾಡುವಾಗ ಮಾತ್ರವೇ ಈ ಆದ್ಯತೆ ನೀಡುವಿಕೆ ಸಾಕಾರಗೊಳ್ಳುವುದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಪ್ರತಿಯೊಂದು ವಿಷಯವನ್ನು ಸ್ಪಷ್ಟವಾಗಿ ವಿವರಿಸಿ ಕೊಟ್ಟಿರುವುದು ನಮಗೆ ದೊರೆತ ಭಾಗ್ಯವಾಗಿದೆ. ಪರದೆ ಧರಿಸದೆ ಇರುವುದು ಮತ್ತು ನಿರ್ಲಜ್ಜತೆ ಬಗ್ಗೆ ಅವರು ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: 'ಯುರೋಪಿನ ಜನರ ಹಾಗೆ ಪರದೆಯನ್ನು ಧರಿಸದಿರುವ ಬಗ್ಗೆ ಕೆಲವರು ಒತ್ತಿ ಹೇಳುತ್ತಿದ್ದಾರೆ. ಆದರೆ ಇದು ಖಂಡಿತವಾಗಿಯೂ ಯೋಗ್ಯವಾದುದಲ್ಲ. ಈ ರೀತಿಯ ಸ್ತ್ರೀಸ್ವಾತಂತ್ರ್ಯ, ಅಶ್ಲೀಲ ಕೃತ್ಯಗಳ ಬೇರು ಆಗಿದೆ. ಯಾವ ದೇಶಗಳಲ್ಲಿ ಇಂತಹ ಸ್ವಾತಂತ್ರ್ಯ ಜಾರಿಗೊಂಡಿದೆಯೋ ಅಲ್ಲಿನ ಜನರ ನೈತಿಕ ಸ್ಥಿತಿಯ ಬಗ್ಗೆ ಆಲೋಚಿಸಿರಿ. ಅವರಿಗೆ ದೊರೆತ ಸ್ವಾತಂತ್ರ್ಯದ ಕಾರಣದಿಂದ ಅವರ ಚಾರಿತ್ರ್ಯ ಮತ್ತು ಪರಿಶುದ್ಧತೆ ವರ್ಧಿಸಿದ್ದರೆ ನಾವು ಹೇಳುವುದು ತಪ್ಪೆಂದು ಒಪ್ಪಿಕೊಳ್ಳುವೆವು. ಆದರೆ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ಯುವ ಪ್ರಾಯದ ಪುರುಷ ಮತ್ತು ಮಹಿಳೆ ಸ್ವಾತಂತ್ರ್ಯದ ಹೆಸರಿನಲ್ಲಿ ಪರದೆಯನ್ನು ಬಳಸದೆ ಇರುವಾಗ ಅವರ ಪರಸ್ಪರ ಸಂಬಂಧ ಎಷ್ಟು ಅಪಾಯಕರವಾಗಬಹುದು. ದುರ್ನೋಟ ಬೀರುವುದು ಇಂದ್ರಿಯೇಚ್ಛೆಗಳಿಂದ ಸೋಲಿಸಲ್ಪಡುವುದು ಬಹುತೇಕ ಮನುಷ್ಯರ ವೈಶಿಷ್ಟ್ಯವಾಗಿದೆ. ಪರದೆಯನ್ನು ಸರಿಯಾಗಿ ಪಾಲಿಸುವುದರಿಂದ ಕೆಲವು ಅಡಚಣೆಗಳು ಉಂಟಾಗುತ್ತದೆ ಎಂದು ಹೇಳುವವರು, ಪರದೆ ಇಲ್ಲದೆ ಇರುವುದರಿಂದ ಏನೆಲ್ಲಾ ವಿಪತ್ತುಗಳು ಬಂದೆರಗುತ್ತವೆ ಎಂಬುದನ್ನು ಯೋಚಿಸಿದ್ದಾರೆಯೇ? ನೀವು ಪುರುಷರ ಸ್ಥಿತಿಯ ಕಡೆಗೆ ನೋಡಿರಿ. ಅವರು ಕಡಿವಾಣವಿಲ್ಲದ ಕುದುರೆಯ ಹಾಗೆ ಆಗಿದ್ದಾರೆ. ಅವರಿಗೆ ಅಲ್ಲಾಹನ ಬಗ್ಗೆ ಭಯವಾಗಲಿ ಪರಲೋಕದ ಬಗ್ಗೆ ದೃಢ ವಿಶ್ವಾಸವಾಗಲಿ ಇರುವುದಿಲ್ಲ. ಅವರು ಲೌಕಿಕ ಸುಖಭೋಗಗಳನ್ನು ತಮ್ಮ ಆರಾಧ್ಯ ವಸ್ತುವಾಗಿ ಮಾಡಿದ್ದಾರೆ. ಆದುದರಿಂದ ಎಲ್ಲದಕ್ಕಿಂತ ಆವಶ್ಯಕವಾದುದೇನೆಂದರೆ ಸ್ವಾತಂತ್ರ್ಯ ನೀಡುವ ಮೊದಲು ಮತ್ತು ಪರದೆ ತ್ಯಜಿಸುವ ಮೊದಲು ಪುರುಷರ ನೈತಿಕ ಸ್ಥಿತಿಯನ್ನು ಸರಿಪಡಿಸಬೇಕು. ಪುರುಷರ ನೈತಿಕ ಸ್ಥಿತಿ ಸರಿಯಾದರೆ ಮತ್ತು ಅವರು ಕನಿಷ್ಠ ತಮ್ಮ ಇಂದ್ರಿಯಾಸಕ್ತಿಗಳಿಂದ ಸೋಲಿಸಲ್ಪಡದ ಸ್ಥಿತಿಗೆ ತಲಪುವುದಾದರೆ ಆಗ ನೀವು ಪರದೆಯ ಆವಶ್ಯಕತೆಯ ಕುರಿತು ಚರ್ಚಿಸಬಹುದಾಗಿದೆ. ಆದರೆ ಇಂದಿನ ಸ್ಥಿತಿಯಲ್ಲಿ ಸ್ವಾತಂತ್ರ್ಯವಿರಬೇಕು, ಪರದೆ ತ್ಯಜಿಸಬೇಕು ಎಂದೆಲ್ಲಾ ಹೇಳುವುದು, ಸಿಂಹಗಳ ಮುಂದೆ ಕುರಿಗಳನ್ನು ಇರಿಸುವ ಹಾಗಿದೆ. ಈ ಜನರಿಗೆ ಏನಾಗಿದೆ? ಯಾವುದೇ ವಿಷಯದ ಪರಿಣಾಮ ಏನಾಗುವುದು ಎಂದು ಇವರು ಏಕೆ ಯೋಚಿಸುವುದಿಲ್ಲ. ಅವರು ಕನಿಷ್ಠ ತಮ್ಮ ಮನಸ್ಸಾಕ್ಷಿಯೊಂದಿಗೆ ಕೇಳಲಿ. ಪುರುಷರು ಸುಧಾರಣೆ ಹೊಂದಿದ ಸ್ಥಿತಿಯಲ್ಲಿದ್ದಾರೆಯೇ? ಅವರ ಮುಂದೆ ಪರದೆ ಧರಿಸದ ಸ್ತ್ರೀಯರನ್ನು ಇರಿಸಬಹುದೇ? ಎಂದು ಯೋಚಿಸಲಿ.'

ಇಂದಿನ ಸಮಾಜದಲ್ಲಿ ಕಂಡುಬರುತ್ತಿರುವ ಕೆಡುಕುಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರತಿಯೊಂದು ಶಬ್ದವನ್ನು ಸತ್ಯವೆಂದು ಸಾಬೀತುಗೊಳಿಸುತ್ತದೆ. ಪ್ರತಿಯೊಬ್ಬ ಅಹ್ಮದಿ ಯುವಕ ಯುವತಿಯರು, ಪುರುಷ ಮತ್ತು ಮಹಿಳೆ ತನ್ನ ಲಜ್ಜೆಯ ಮಟ್ಟವನ್ನು ಉನ್ನತಗೊಳಿಸಿ ಸಮಾಜದ ಕೊಳಕಿನಿಂದ ತನ್ನನ್ನು ರಕ್ಷಿಸಲು ಪ್ರಯತ್ನಿಸುತ್ತಾ ಇರಬೇಕು. ಇದು ತಂದೆ ತಾಯಂದಿರು, ವಿಶಿಷ್ಟವಾಗಿ ತಾಯಂದಿರು ಮಾಡಬೇಕಾದ ಕೆಲಸವಾಗಿದೆ. ತಮ್ಮ ಮಕ್ಕಳಿಗೆ ಇಸ್ಲಾಮ್ ಧರ್ಮದ ಉಪದೇಶಗಳ ಬಗ್ಗೆ ಮತ್ತು ಸಮಾಜದ ಕೆಡುಕುಗಳ ಬಗ್ಗೆ ತಿಳಿಸುತ್ತಾ ಇರಬೇಕು. ಹೀಗೆ ಮಾಡಿದರೆ ಮಾತ್ರ ನಮ್ಮ ಮುಂದಿನ ಪೀಳಿಗೆ ಧರ್ಮದಲ್ಲಿ ನೆಲೆನಿಲ್ಲುವುದು. ಮತ್ತು ತಥಾಕಥಿತ ಅಭಿವೃದ್ಧಿ ಹೊಂದಿದ ಸಮಾಜದ ವಿಷದಿಂದ ಸುರಕ್ಷಿತವಾಗುವುದು. ಒಬ್ಬ ಬಾಲಿಕೆ ನನಗೆ ಪತ್ರ ಬರೆದು ಹೀಗೆ ಹೇಳಿದ್ದಾಳೆ: ನಾನು ಬಹಳ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಬ್ಯಾಂಕಿನಲ್ಲಿ ಉತ್ತಮ ಉದ್ಯೋಗ ದೊರಕಲಿದೆ. ಆದರೆ ಅಲ್ಲಿ ಹಿಜಾಬ್ ಹಾಕಲು, ಕೋಟ್ ಧರಿಸಲು ಅನುಮತಿ ಸಿಗುವುದಿಲ್ಲವಾದರೆ ನಾನು ಹಿಜಾಬ್ ಧರಿಸದೆಯೇ ಅಲ್ಲಿ ಕೆಲಸ ಮಾಡಬಹುದೇ? ಕೆಲಸ ಮುಗಿದು ಹೊರ ಬರುವಾಗ ನಾನು ಹಿಜಾಬ್ ಧರಿಸುವೆನು. ಆ ಬಾಲಿಕೆ ಹೀಗೆ ಸಹ ಬರೆದು ತನ್ನ ಸಾತ್ವಿಕತೆ ಪ್ರದರ್ಶಿಸಿದ್ದಾಳೆ: ನೀವು ನನ್ನೊಂದಿಗೆ ಆ ಕೆಲಸಕ್ಕೆ ಸೇರಬೇಡ ಎಂದು ಹೇಳುವುದಾದರೆ ನಾನು ಆ ಕೆಲಸಕ್ಕೆ ಸೇರಲಾರೆನು.

ಒಬ್ಬಳು ಮಾತ್ರವಲ್ಲ ಅನೇಕ ಬಾಲಿಕೆಯರು ಇಂತಹ ಪ್ರಶ್ನೆ ಕೇಳಿದ್ದಾರೆ. ಡಾಕ್ಟರ್‌ಗಳಾದ ಮಹಿಳೆಯರಿಗೆ ಸಾಂಪ್ರದಾಯಿಕ ಬುರ್ಖ ಅಥವಾ ಹಿಜಾಬ್ ಧರಿಸಿ ಕೆಲಸ ಮಾಡಲು ಸಾಧ್ಯವಾಗದು. ಉದಾಹರಣೆಗೆ ಆಪರೇಶನ್ ಥಿಯೇಟರಿನಲ್ಲಿ ಅದು ಸಾಧ್ಯವಾಗದು. ಆದರೆ ಆಗ ಅವರ ತಲೆಯಲ್ಲಿ ಟೋಪಿ ಇರುತ್ತದೆ. ಮುಖಕ್ಕೆ ಮಾಸ್ಕ್ ಹಾಕಿರುತ್ತಾರೆ. ಸಡಿಲಾದ ಪೋಷಾಕು ಧರಿಸಿರುತ್ತಾರೆ. ಬೇರೆ ಸಂದರ್ಭಗಳಲ್ಲಿ ಡಾಕ್ಟರ್ ಮಹಿಳೆಯರು ಸಹ ಪರದೆ ಧರಿಸಬಹುದಾಗಿದೆ. ರಬ್ವದಲ್ಲಿದ್ದ ನಮ್ಮ ಡಾಕ್ಟರ್ ಫಹ್ಮೀದರನ್ನು ನಾವು ಯಾವಾಗಲೂ ಪರದೆ ಧರಿಸಿರುವುದಾಗಿ ಕಾಣುತ್ತಿದ್ದೆವು. ಡಾಕ್ಟರ್ ನುಸ್ರತ್ ಜಹಾಂ ಸಹ ಬಹಳ ಕಟ್ಟುನಿಟ್ಟಾಗಿ ಪರದೆ ಧರಿಸುತ್ತಿದ್ದರು.

ಇದೇ ರೀತಿ ರೀಸರ್ಚ್(ಸಂಶೋಧನೆ) ನಡೆಸುವ ವಿದ್ಯಾರ್ಥಿನಿಯರೊಂದಿಗೆ ನಾನು ಹೇಳಿದ್ದೆ. ರೀಸರ್ಚ್ ಮಾಡುವ ವಿದ್ಯಾರ್ಥಿನಿಯರು ಲೆಬೋರ್ಟರಿಯಲ್ಲಿ, ಅಲ್ಲಿ ಧರಿಸಬಹುದಾದ ವಿಶಿಷ್ಟ ಪೋಷಾಕು ಧರಿಸಬಹುದು. ಆಗ ಹಿಜಾಬ್ ಧರಿಸಬೇಕಾಗಿಲ್ಲ. ಅಲ್ಲಿ ಅವರು ಟೋಪಿ ಮೊದಲಾದುವುಗಳನ್ನು ಧರಿಸಬೇಕಾಗುತ್ತದೆ. ಆದರೆ ಅವರು ಹೊರಗೆ ಬರುವಾಗ ಇಸ್ಲಾಮ್ ವಿಧಿಸುವ ರೀತಿಯ ಪರದೆ ಧರಿಸಬೇಕು. ಆದರೆ ಬ್ಯಾಂಕ್ ಕೆಲಸ ಮಾನವೀಯರಿಗೆ ಸೇವೆ ಸಲ್ಲಿಸುವ ಕೆಲಸವೇನೂ ಅಲ್ಲ. ಆದುದರಿಂದ ಇಂತಹ ಸಾಮಾನ್ಯ ಕೆಲಸಗಳನ್ನು ಮಾಡುವಾಗ ಹಿಜಾಬ್ ಕಳಚಲು ಅನುಮತಿ

ನೀಡಲಾಗುವುದಿಲ್ಲ. ಅಲ್ಲಿ ಯಾವುದೇ ವಿಶಿಷ್ಟ ಪೋಷಾಕು ಸಹ ಇರುವುದಿಲ್ಲ. ಯಾವಾಗಲೂ ನೆನಪಿಡಬೇಕಾದುದೇನೆಂದರೆ ಲಜ್ಜೆ ಪ್ರಕಟಣೆಗೆ ಲಜ್ಜೆಯಿಂದ ಕೂಡಿದ ಪೋಷಾಕು ಆವಶ್ಯಕವಾಗಿದೆ. ಈಗ ಜಾರಿಯಲ್ಲಿರುವ ಪರದೆಯ ರೀತಿ, ಲಜ್ಜೆ ಮತ್ತು ಪೋಷಾಕಿನ ಒಂದು ಭಾಗವಾಗಿದೆ. ಪರದೆಯನ್ನು ಮೃದುಗೊಳಿಸಿದರೆ ನಮ್ಮ ಲಜ್ಜೆ ಮತ್ತು ಪೋಷಾಕಿನಲ್ಲಿಯೂ ಅನೇಕ ನೆವನಗಳನ್ನು ಹೇಳಿ ಬದಲಾವಣೆ ಬಂದು ಬಿಡುವುದು. ಆಗ ನಿರ್ಲಜ್ಜತೆ ವರ್ಧಿಸುತ್ತಾ ಇರುವ ಸಮಾಜದಲ್ಲಿ ನಾವು ಸೇರಿ ಹೋಗುವೆವು. ಧರ್ಮವನ್ನು ಪಾಲಿಸುತ್ತಿರುವ ಜನರನ್ನು ಮತ್ತು ವಿಶಿಷ್ಟವಾಗಿ ಮುಸ್ಲಿಮರನ್ನು ಧರ್ಮದಿಂದ ಹೇಗೆ ದೂರ ಸರಿಯುವಂತೆ ಮಾಡುವುದು ಎಂದು ಇಂದಿನ ಸಮಾಜ ನೋಡುತ್ತಾ ಇದೆ.

ಧಾರ್ಮಿಕ ಉಪದೇಶಗಳನ್ನು ಮತ್ತು ಧಾರ್ಮಿಕ ಸಂಪ್ರದಾಯಗಳನ್ನು ಮುಸ್ಲಿಮರ ಒಳಗಿನಿಂದ ಕೊನೆಗೊಳಿಸಬೇಕು ಎಂದು ಇಸ್ಲಾಮ್ ವಿರೋಧಿ ಶಕ್ತಿಗಳು ಬಹಳವಾಗಿ ಪ್ರಯತ್ನಿಸುತ್ತಾ ಇವೆ. ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಅವರು ಧರ್ಮವನ್ನು ಯಾವ ರೀತಿ ನಿರ್ನಾಮ ಮಾಡಲು ಪ್ರಯತ್ನಿಸುತ್ತಿದ್ದಾರೆಂದರೆ, ಆ ಬಗ್ಗೆ ಅವರ ಮೇಲೆ ದೋಷಾರೋಪವೇನೂ ಬರಬಾರದೆಂದು ಅವರು ಜಾಗರೂಕರಾಗಿರುತ್ತಾರೆ. ಅವರು ಬಲಾತ್ಕಾರದಿಂದ ಧರ್ಮವನ್ನು ಕೊನೆಗೊಳಿಸಿದರು ಎಂಬ ದೋಷಾರೋಪ ಉಂಟಾಗದಂತೆ ಅವರು ಈ ಕೆಲಸ ಮಾಡುತ್ತಾರೆ. ಆದುದರಿಂದ ನಾವು ಬಹಳ ಹೆಚ್ಚು ಪ್ರಾರ್ಥಿಸಬೇಕು. ಈ ಶೈತಾನೀ ಕುತಂತ್ರಗಳನ್ನು ಎದುರಿಸಲು ಅಲ್ಲಾಹನು ನಮಗೆ ಶಕ್ತಿ ಮತ್ತು ಭಾಗ್ಯ ನೀಡಲಿ ಮತ್ತು ನಮಗೆ ಸಹಾಯ ಮಾಡಲಿ. ನಾವು ಸತ್ಯದಲ್ಲಿ ನೆಲೆ ನಿಂತಿದ್ದರೆ- ನಿಶ್ಚಯವಾಗಿಯೂ ನಾವು ಸತ್ಯದಲ್ಲಿ ನೆಲೆ ನಿಂತಿದ್ದೇವೆ- ನಮ್ಮ ಜಯ ಮುಂದೆ ನಿಶ್ಚಯವಾಗಿಯೂ ಸಂಭವಿಸುವುದು. ಇಸ್ಲಾಮ್ ಧರ್ಮ ತತ್ವಗಳೇ ಲೋಕದ ಮೇಲೆ ಜಯಶಾಲಿಯಾಗುವುದು.

ಇಸ್ಲಾಮ್ ಸದಾಕಾಲ ನೆಲೆ ನಿಲ್ಲುವ ಧರ್ಮವಾಗಿದೆ. ಪವಿತ್ರ ಖುರ್ಆನಿನ ಉಪದೇಶಗಳು ಖಿಯಾಮತ್ ತನಕ ನೆಲೆ ನಿಲ್ಲುವುದು. ಆದುದರಿಂದ ನಾವು ಯಾವುದೇ ಕೀಳರಿಮೆಗೆ ಪಾತ್ರರಾಗದೆ ಇಸ್ಲಾಮ್ ಧರ್ಮ ತತ್ವಗಳನ್ನು ಅನುಷ್ಠಾನಕ್ಕೆ ತರಲು ನಾವು ಪ್ರಯತ್ನಿಸಬೇಕು. ನಾವು ಅವುಗಳಲ್ಲಿ ನೆಲೆ ನಿಲ್ಲಬೇಕು. ಮತ್ತು ನಾವು ಅನ್ಯರೊಂದಿಗೆ ಹೇಳಬೇಕು, ನೀವು ಹೇಳುವ ಮಾತುಗಳು ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿವೆ, ವಿನಾಶದ ಕಡೆಗೆ ಒಯ್ಯುವವುಗಳಾಗಿವೆ ಎಂದು. ಇಸ್ಲಾಮ್ ಮನುಷ್ಯನನ್ನು ತಪ್ಪು ನಿಬಂಧನೆಗಳಲ್ಲಿ ಸಿಲುಕಿಸುವ ಧರ್ಮವಲ್ಲ. ಆವಶ್ಯಕ ಸಂದರ್ಭಗಳಲ್ಲಿ ತನ್ನ ಉಪದೇಶಗಳನ್ನು ಮೃದು ಗೊಳಿಸುವಂತಹ ಧರ್ಮವೂ ಅದಾಗಿದೆ.

ಅಹ್ಮದಿಯರಾದ ನಾವು ಯಾವಾಗಲೂ ನೆನಪಿಡಬೇಕಾದುದೇನೆಂದರೆ ಇದು ಬಹಳ ಅಪಾಯಕರ ಕಾಲಘಟ್ಟವಾಗಿದೆ. ಶೈತಾನನು ಬಹಳ ಬಿರುಸಾದ ಆಕ್ರಮಣ ಮಾಡುತ್ತಾ ಇದ್ದಾನೆ. ಮುಸ್ಲಿಮರು ಅದರಲ್ಲೂ ವಿಶಿಷ್ಟವಾಗಿ ಅಹ್ಮದಿಯಾ ಮುಸ್ಲಿಮರು, ಪುರುಷರು, ಮಹಿಳೆಯರು, ಯುವ ಜನರು ಮತ್ತು ಎಲ್ಲರೂ ಧಾರ್ಮಿಕ ಮೌಲ್ಯಗಳನ್ನು ಸಂರಕ್ಷಿಸಲು ಪ್ರಯತ್ನ ಮಾಡದೆ ಇದ್ದರೆ ನಾವು ರಕ್ಷಿಸಲ್ಪಡುವ ಯಾವ ಖಾತರಿಯೂ ಬಾಕಿ ಇರುವುದಿಲ್ಲ. ನಾವು ಇತರರಿಗಿಂತ ಹೆಚ್ಚಿನ ಮಟ್ಟದಲ್ಲಿ ಅಲ್ಲಾಹನ ಹಿಡಿತಕ್ಕೆ ಪಾತ್ರರಾಗುವೆವು. ಏಕೆಂದರೆ ನಾವು ಸತ್ಯವನ್ನು ಮನವರಿಕೆ ಮಾಡಿದ್ದೇವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ನಮಗೆ ಸತ್ಯವನ್ನು ಮನವರಿಕೆ ಮಾಡಿಕೊಟ್ಟರು. ಆದರೆ ನಾವು ಅವುಗಳನ್ನು ಅನುಷ್ಠಾನಕ್ಕೆ ತರಲಿಲ್ಲ. ನಾವು ನಮ್ಮನ್ನು ನಾಶವಾಗುವುದರಿಂದ ರಕ್ಷಿಸಿಕೊಳ್ಳಬೇಕಾದರೆ ಇಸ್ಲಾಮ್ ಧರ್ಮದ ಪ್ರತಿಯೊಂದು ಉಪದೇಶಗಳನ್ನು ನಾವು ಪೂರ್ಣ ವಿಶ್ವಾಸದೊಂದಿಗೆ ಅನುಷ್ಠಾನಕ್ಕೆ ತಂದು ಜೀವಿಸಬೇಕಾದುದು ಆವಶ್ಯಕವಾಗಿದೆ. ಅಭಿವೃದ್ಧಿ ಹೊಂದಿದ ದೇಶಗಳ ಜೊತೆಯಲ್ಲಿ ಚಲಿಸುವುದರಲ್ಲಿಯೇ ನಮ್ಮ ಬದುಕು ಬಾಳ್ವೆ ಇರುವುದು ಎಂದು ಭಾವಿಸಬೇಡಿರಿ. ಅವರ ಅಭಿವೃದ್ಧಿ ಅದರ ಉನ್ನತಿಯನ್ನು ತಲಪಿದೆ. ಅವರು ಈಗ ಮಾಡುವ ಕೆಲಸಗಳು ಅವರನ್ನು ಅವನತಿಗೆ ಒಯ್ಯುವವುಗಳಾಗಿವೆ. ಅದರ ಚಿಹ್ನೆಗಳು ಗೋಚರಿಸಲು ತೊಡಗಿವೆ. ಅಲ್ಲಾಹನ ಕೋಪವನ್ನು ಈ ಜನರು ಕೂಗಿ ಕರೆಯುತ್ತಿದ್ದಾರೆ. ಅವರು ತಮ್ಮ ವಿನಾಶವನ್ನು ಆಮಂತ್ರಿಸುತ್ತಿದ್ದಾರೆ. ಆದುದರಿಂದ ನಾವು ಮಾನವೀಯ ಅನುಕಂಪದಿಂದ ಕೂಡಿದವರಾಗಿ ನಾವೇ ಅವರಿಗೆ ಸರಿಯಾದ ಮಾರ್ಗದರ್ಶನ ನೀಡಿ ಅವರನ್ನು ರಕ್ಷಿಸಲು ಪ್ರಯತ್ನ ಮಾಡಬೇಕಾಗಿದೆ. ಅಲ್ಲದೆ ನಾವು ಸಹ ಅವರ ಹಾಗೆ ಆಗಲು ಪ್ರಯತ್ನ ಮಾಡಬಾರದು. ಅವರ ದುರಹಂಕಾರ ಮತ್ತು ಅವರು ಧರ್ಮದಿಂದ ದೂರ ಸರಿದಿರುವ ಕಾರಣ ಅವರ ಸುಧಾರಣೆ ಕಷ್ಟವೆಂದು ಕಾಣುತ್ತದೆ. ಯಾವ ಜನಾಂಗಗಳು ತಮ್ಮ ನೈತಿಕ ಮತ್ತು ಧಾರ್ಮಿಕ ಮೌಲ್ಯಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆಯೋ ಆ ಜನಾಂಗಗಳು ಮುಂದೆ ಲೋಕದ ಅಭಿವೃದ್ಧಿಯಲ್ಲಿ ತಮ್ಮ ಕಾರ್ಯ ನಿರ್ವಹಣೆ ಮಾಡುವುವು. ನಾನು ಯಾವಾಗಲೂ ಹೇಳುತ್ತಿರುವ ಹಾಗೆ, ನಾವು ಮತ್ತು ವಿಶಿಷ್ಟವಾಗಿ ನಮ್ಮ ಯುವ ಜನರು, ಅಲ್ಲಾಹನು ನೀಡಿದ ಉಪದೇಶಗಳ ಬಗ್ಗೆ ಚಿಂತಿಸಬೇಕು. ಲೋಕದಿಂದ ಪ್ರಭಾವಿತರಾಗಿ ಅದರ ಹಿಂದೆ ಸಾಗುವುದರ ಬದಲಾಗಿ ಲೋಕವನ್ನು ತಮ್ಮ ಹಿಂದೆ ನಡೆಯುವಂತೆ ಮಾಡುವ ಆವಶ್ಯಕತೆ ಇದೆ.

ನಾನು ಪರದೆ ಮತ್ತು ಪೋಷಾಕಿನ ಬಗ್ಗೆ ನನ್ನ ಮಾತುಗಳನ್ನು ಪ್ರಾರಂಭಿದ್ದೆನು. ಇದರ ಬಗ್ಗೆ ನಾನು ಇನ್ನೊಂದು ಮಾತನ್ನು ಹೇಳಲು ಬಯಸುತ್ತೇನೆ. ನಾನು ವಿಷಾದಭರಿತನಾಗಿ ಹೇಳುತ್ತಿದ್ದೇನೆ. ಕೆಲವು ಜನರು ಹೇಳುತ್ತಾರೆ, ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ಅಭಿವೃದ್ಧಿಗೆ ಪರದೆ ಮಾತ್ರ ಆವಶ್ಯಕ ವಸ್ತುವಾಗಿದೆಯೇ? ಕೆಲವರು ಹೇಳುತ್ತಾರೆ: ಈ ಉಪದೇಶ ಈಗ ಹಳತಾಗಿದೆ.

ನಾವು ಲೋಕವನ್ನು ಎದುರಿಸಲು ಇಂತಹ ವಿಷಯಗಳನ್ನು ಬಿಟ್ಟು ಬಿಡಬೇಕು ಎಂದು ಹೇಳುತ್ತಾರೆ– (ನಊದುಬಿಲ್ಲಾಹ್). ಇಂತಹ ಜನರಿಗೆ ಸ್ಪಷ್ಟವಾಗಬೇಕಾದುದೇನೆಂದರೆ ಲೌಕಿಕವಾದಿಗಳ ಹಿಂದೆ ಚಲಿಸುತ್ತಾ ಇದ್ದರೆ, ಅವರ ರೀತಿಯಲ್ಲಿ ಜೀವಿಸುತ್ತಿದ್ದರೆ, ಅಂತಹ ಜನರು ಲೋಕವನ್ನು ಎದುರಿಸುವುದಕ್ಕೆ ಬದಲಾಗಿ ಅವರು ಲೋಕದೊಳಗೆ ಮುಳುಗಿ ಹೋಗುವರು. ಅವರ ನಮಾಝ್‌ಗಳು ಕ್ರಮೇಣ ಬಾಹ್ಯ ರೂಪದಲ್ಲಿ ಮಾತ್ರ ಇರುವುದು. ಅವರು ಮಾಡುವ ಸತ್ಕರ್ಮಗಳು ಮತ್ತು ಧರ್ಮದ ಕಾರ್ಯಗಳು ಸಹ ಬಾಹ್ಯರೂಪದಲ್ಲಿಯೇ ಇರುವುದು. ಅನಂತರ ಕ್ರಮೇಣ ಅವುಗಳು ಸಹ ಇಲ್ಲವಾಗುವುದು.

ಆದುದರಿಂದ ಅಲ್ಲಾಹನ ಯಾವುದೇ ಆಜ್ಞೆಯನ್ನು ಸಾಮಾನ್ಯವಾದುದೆಂದು ಗಣಿಸಬಾರದು. ಇದು ಬಹಳ ಭಯಪಡಬೇಕಾದ ಸ್ಥಿತಿಯಾಗಿದೆ. ಅಲ್ಲಾಹನು ಮತ್ತು ಅವನ ಸಂದೇಶವಾಹಕರಾದ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಯಾವ ಆಜ್ಞೆ ನೀಡಿದರೋ ಅವು ಇಸ್ಲಾಮಿನ ಅಭಿವೃದ್ಧಿಗೆ ಆವಶ್ಯಕವಾಗಿವೆ. ಇಸ್ಲಾಮ್ ಆಜ್ಞೆ ನೀಡಿದುದು ಕೇವಲ ಮಹಿಳೆಯರಿಗೆ ಮಾತ್ರವಲ್ಲ. ಪುರುಷರಿಗೂ ಮಹಿಳೆಯರಿಗೂ ಆಜ್ಞೆ ನೀಡಲಾಗಿದೆ.

قُل لِّلْمُؤْمِنِينَ يَغُضُّوا مِنْ أَبْصَارِهِمْ وَيَحْفَظُوا فُرُوجَهُمْ ۚ ذَٰلِكَ أَزْكَىٰ لَهُمْ ۗ إِنَّ اللَّهَ خَبِيرٌ بِمَا يَصْنَعُونَ

**ಖುಲ್ ಲಿಲ್ ಮೂಮಿನೀನ ಯಗುಝ್ಝೂ ಮಿನ್ ಅಬ್‌ಸಾರಿಹಿಮ್ ವಯಹ್‌ಫಝೂ ಫುರೂಜಹುಮ್ ಝಾಲಿಕ ಅಝ್‌ಕಾಲಹುಮ್ ಇನ್ನಲ್ಲಾಹ ಖಬೀರುನ್ ಬಿಮಾ ಯಸ್‌ನಊನ್.**

ಸತ್ಯವಿಶ್ವಾಸಿಗಳೊಂದಿಗೆ ಹೇಳು – ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲಿ ಮತ್ತು ತಮ್ಮ ಗುಪ್ತಾಂಗಗಳನ್ನು ಕಾಪಾಡಿಕೊಳ್ಳಲಿ. ಅದು ಅವರಿಗೆ ಪರಿಶುದ್ಧವಾದ ಮಾರ್ಗವಾಗಿದೆ. ಅವರ ಕೃತ್ಯಗಳ ಬಗ್ಗೆ ಅಲ್ಲಾಹನು ಚೆನ್ನಾಗಿ ಬಲ್ಲವನಾಗಿದ್ದಾನೆ. (ಪವಿತ್ರ ಖುರ್‌ಆನ್ 24: 31).

ಅಲ್ಲಾಹನು ಸತ್ಯವಿಶ್ವಾಸಿಗಳಾದ ಪುರುಷರೊಂದಿಗೆ ಮೊದಲು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿಡಲು ಹೇಳಿರುವನು. ಏಕೆ? **ಝಾಲಿಕ ಅಝ್‌ಕಾ ಲಹುಮ್** ಅದು ಅವರಿಗೆ ಪರಿಶುದ್ಧ ಮಾರ್ಗವಾಗಿದೆ. ಪರಿಶುದ್ಧಿಯನ್ನು ಗಳಿಸದಿದ್ದರೆ ಅಲ್ಲಾಹನ ಸಾಮೀಪ್ಯ ದೊರಕಲಾರದು. ಮಹಿಳೆಯರಿಗೆ ಪರದೆಯ ಬಗ್ಗೆ ಉಪದೇಶಿಸುವ ಮೊದಲು ಪುರುಷರೊಂದಿಗೆ ಅಲ್ಲಾಹನು ಹೇಳಿರುವನು, ನಿಮ್ಮ ಭಾವನೆಗಳು ಉದ್ರೇಕಿಸಲ್ಪಡಬಹುದಾದ ಪ್ರತಿಯೊಂದು ವಸ್ತುವಿನಿಂದ ನೀವು ನಿಮ್ಮನ್ನು ರಕ್ಷಿಸಿಕೊಳ್ಳಿರಿ ಎಂದು.

ಯಾವುದೇ ಅಹ್ಮದಿ ಯುವತಿಯರಿಗೆ, ಅಹ್ಮದಿ ಮಹಿಳೆಯರಿಗೆ, ಅಹ್ಮದಿ ಯುವಕರಿಗೆ ಯಾವುದೇ ರೀತಿಯ ಕೀಳರಿಮೆಗೆ ಪಾತ್ರವಾಗುವ ಆವಶ್ಯಕತೆ ಇಲ್ಲ. ಇಸ್ಲಾಮಿನ ಉಪದೇಶಗಳೇ ಲೋಕದಲ್ಲಿ ಶಾಂತಿ ಸ್ಥಾಪಿಸುವಂತಹದು ಮತ್ತು ಅಲ್ಲಾಹನ ಸಾಮೀಪ್ಯ ಗಳಿಸಿಕೊಡುವುದಾಗಿದೆ. ಲೋಕವು ಮುಂದೆ ಒಂದು ದಿನ ಮನವರಿಕೆ ಮಾಡುವುದು, ಇಸ್ಲಾಮಿನ ಉಪದೇಶಗಳ ಮೂಲಕ ಹೊರತು ಅನ್ಯ ಮಾರ್ಗವಿಲ್ಲ, ಇಸ್ಲಾಮೀ ತತ್ವಗಳ ಬಗ್ಗೆಯೇ ಚಿಂತಿಸಿ ಅದರ ಪ್ರಕಾರ ವರ್ತಿಸಬೇಕು ಎಂದು ಅದು ತಿಳಿದುಕೊಳ್ಳುವುದು. ಪುರುಷರಿಗೆ 'ನೀವು ನಿಮ್ಮ ಕಣ್ಣುಗಳನ್ನು ಹತೋಟಿಯಲ್ಲಿರಿಸಿರಿ, ಸ್ತ್ರೀಯರ ಗೌರವ ಕಾಪಾಡಿರಿ' ಎಂದು ಅಜ್ಞಾಪಿಸಿದ ನಂತರ ಮಹಿಳೆಯರಿಗೂ ಅದು ಆಜ್ಞೆ ನೀಡಿದೆ. ಅವರು ತಮ್ಮ ಕಣ್ಣುಗಳನ್ನು ಹತೋಟಿಯಲ್ಲಿರಿಸಬೇಕೆಂದು. ಅವರು ಪರದೆ ಯಾವ ರೀತಿಯಲ್ಲಿ ಮಾಡಬೇಕು, ಯಾರೆಲ್ಲರ ಮುಂದೆ ಪರದೆ ಧರಿಸಬೇಕು ಎಂದು ಸವಿಸ್ತಾರವಾಗಿ ಆಜ್ಞಾಪಿಸಲಾಗಿದೆ. ನೀವು ಈ ಆಜ್ಞೆಗಳನ್ನು ಪಾಲಿಸಿದರೆ ನೀವು ಜಯಶಾಲಿಗಳಾಗುವಿರೆಂದು ಸಹ ಮಹಿಳೆಯರೊಂದಿಗೆ ಹೇಳಲಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೇಳುತ್ತಾರೆ: 'ಇಂದಿನ ಕಾಲದಲ್ಲಿ ಪರದೆಯ ವಿರುದ್ಧ ಆಕ್ರಮಣ ಮಾಡಲಾಗುತ್ತಿದೆ. ಆದರೆ ಇಸ್ಲಾಮೀ ಪರದೆಯು ಸೆರೆಮನೆಯಲ್ಲ ಎಂದು ಈ ಜನರಿಗೆ ತಿಳಿದಿಲ್ಲ. ಅನ್ಯರಾದ ಪುರುಷ ಮತ್ತು ಮಹಿಳೆ ಒಬ್ಬರನ್ನೊಬ್ಬರು ನೋಡದಿರುವಂತೆ ಅದೊಂದು ತಡೆಯಾಗಿದೆ. ಪರದೆ ಇದ್ದರೆ ಮುಗ್ಗರಿಸಿ ಬೀಳುವುದರಿಂದ ರಕ್ಷಣೆ ಪಡೆಯುವರು.'

ಮಹಿಳೆಯರು ತಮ್ಮ ಸೌಂದರ್ಯವನ್ನು ಯಾರ ಮುಂದೆ ಪ್ರಕಟಿಸಬಹುದು ಎಂಬುದರ ವಿವರಣೆ ಪವಿತ್ರ ಖುರ್‌ಆನ್‌ನಲ್ಲಿ ನೀಡಲಾಗಿದೆ. ಸಮೀಪದ ಸಂಬಂಧಿಕರು, ಸಹೋದರ, ಸಹೋದರಿಯರು, ಪತಿ, ತಂದೆ, ತಾಯಿ, ಸಹೋದರ ಸಹೋದರಿಯರ ಮಕ್ಕಳು ಅವರ ಮುಂದೆ ಪರದೆ ಮಾಡಬೇಕಾಗಿಲ್ಲ. ಮೇಕಪ್ ಮೊದಲಾದುವು ಅವರ ಮುಂದೆ ಆಗಬಹುದು. ಅವರ ಹೊರತು ಬೇರೆ ಯಾರ ಮುಂದೆಯೂ ಇಲ್ಲ. ಯಾರೆಲ್ಲರ ಮುಂದೆ ಪರದೆ ಮಾಡಬೇಕಾಗಿಲ್ಲ ಎಂಬುದರ ಸವಿಸ್ತಾರವಾದ ವಿವರಣೆ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ನೀಡಿರುವನು. ತನ್ನಿಂದ ತಾನೆ ಪ್ರಕಟವಾಗುವುದರ ಬಗ್ಗೆ, ಎಂದರೆ ಎತ್ತರ ಗಾತ್ರ ಮೊದಲಾದುವುಗಳ ಪ್ರಕಟಣೆ ಮಾಡಬಹುದಾಗಿದೆ. ಆದರೆ ಯಾರ ಮುಂದೆ ಸೌಂದರ್ಯ ಪ್ರಕಟ ಮಾಡುವ ಅನುಮತಿ ನೀಡಲಾಗಿದೆಯೋ ಅವರ ಮುಂದೆ ಮನೆಯೊಳಗೆ ಸಹ ಬಿಗಿಯಾದ ಜೀನ್ಸ್ ಮತ್ತು ಬ್ಲೌಸ್ ಧರಿಸಿ ತಿರುಗಾಡಬಾರದು. ಪಾರದರ್ಶಕ ಉಡುಪುಗಳನ್ನು ಧರಿಸಬಾರದು.

ನಾನು ಮುರಬ್ಬಿಗಳೊಂದಿಗೆ ಮತ್ತು ಅವರ ಪತ್ನಿಯರೊಂದಿಗೆ ಹೇಳಲು ಬಯಸುವುದೇನೆಂದರೆ ಅವರು ತಮ್ಮ ಪೋಷಾಕು ಮತ್ತು ದೃಷ್ಟಿಯ ಬಗ್ಗೆ ಬಹಳ ಜಾಗರೂಕತೆ ವಹಿಸಬೇಕು. ಅವರ ಉದಾಹರಣೆ ಜಮಾಅತಿನ ಜನರು ನೋಡುತ್ತಾ ಇರುತ್ತಾರೆ. ಮುರಬ್ಬಿ ಮತ್ತು ಮುಬಲ್ಲಿಗರ ಪತ್ನಿಯರು ಸಹ ಮುರಬ್ಬಿ

ಆಗಿರುತ್ತಾರೆ. ಆಕೆ ತನಗೆ ಸಂಬಂಧಿಸಿ ಉನ್ನತ ಮಟ್ಟದ ಉದಾಹರಣೆ ಸ್ಥಾಪಿಸಬೇಕು.

ನಮ್ಮ ಪುರುಷರು ಮತ್ತು ನಮ್ಮ ಮಹಿಳೆಯರು ಲಜ್ಜೆಯ ಉನ್ನತ ಉದಾಹರಣೆ ಸ್ಥಾಪಿಸುವವರನ್ನಾಗಿ ಅಲ್ಲಾಹನು ಮಾಡಲಿ. ನಾವೆಲ್ಲರೂ ಇಸ್ಲಾಮಿನ ಆಜ್ಞೆಗಳನ್ನು ಪ್ರತಿಯೊಂದು ರೀತಿಯಲ್ಲಿ ಪಾಲಿಸುವವರಾಗುವಂತೆ ಅಲ್ಲಾಹನು ಮಾಡಲಿ – ಆಮೀನ್.

——————*****——————

*Friday Sermon delivered by Hadrath Khaleefatul Masih Al Khamis(atba)*

*At, Masjid Baithul Futhuh, London on 13-01-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon